## ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಗುಲಬರ್ಗಾ

ಸಿ4(1) ಪ್ರೌಶಾಶಿ ಶಿ.ಸೇ.ವಿ. ಮಾಹಿತಿ 64 / 2011-12 ದಿನಾಂಕ 07.06.2012

### ಜ್ಞಾಪನ

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಗುಲಬರ್ಗಾ ವಿಭಾಗ ಮಟ್ಟದ ಸರಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗೆ.

ಉಲ್ಲೇಖ:- 1 ಸರಕಾರಿ ಅಧಿಸೂಚನೆ ಸಂಖ್ಯೆ:ಡಿ.ಪಿ.ಎ.ಆರ್-12/ಎಸದ.ಡಿ.ಇ/2007 ದಿ :29-01-2008
2) ಸರ್ಕಾರದ ಪತ್ರ ಸಂಖ್ಯೆ:ಇಡಿ-250/ಡಿ.ಪಿ.ಎ.ಆರ್-12/ಎಸ್.ಡಿ.ಇ/2007 ದಿ:29-01-2008
3) ಈ ಕಚೇರಿಯ ಜ್ಞಾಪನಾ ಪತ್ರ ಸಮ ಸಂಖ್ಯೆ ದಿನಾಂಕ 07.05.2012
4) ಈ ಕಚೇರಿಯ ಜ್ಞಾಪನಾ ಪತ್ರ ಸಮ ಸಂಖ್ಯೆ ದಿನಾಂಕ 31.05.2012
5) ಗುಲಬರ್ಗಾ ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಸಲ್ಲಿಸಿರುವ ಆಕ್ಷಪಣೆಗಳ ಪ್ರಕಾರ

-0-

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ,ಉಲ್ಲೇಖ-01 ರ ಸರ್ಕಾರಿ ಅಧಿಸೂಚನೆ ಹಾಗೂ ಉಲ್ಲೇಖ-2 ರ ಸರ್ಕಾರಿ ಸುತ್ತೋಲೆಯಂತೆ ಗುಲಬರ್ಗಾ ವಿಭಾಗದ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಮುಖ್ಯಗುರುಗಳ ಗ್ರೂಪ -ಬಿ ವೃಂದದ ಹಾಗೂ ತತ್ಸಮಾನ ವೃಂದದ ಹುದ್ದೆಗಳಿಗೆ ಬಡ್ತಿ ನೀಡಲು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿರುತ್ತಾರೆ.

ಅದರಂತೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಶಿಕ್ಷಕರ ಗುಲಬರ್ಗಾ ವಿಭಾಗದಲ್ಲಿ ವಿಭಾಗ ಮಟ್ಟದ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (03) ರನ್ವಯ ಕ್ಷೇತ್ರ ಶಿಕ್ಷಣಾಧಿಕರಿ ಕಛೇರಿಯಲ್ಲಿ ಅಂತರಜಾಲ ತಂತ್ರಾಂಶದಲ್ಲಿ ಭರ್ತಿ ಮಾಡಿದ ಪ್ರೌಢಶಾಲಾ ಸಹ ಶಿಕ್ಷಕರ ಸೇವಾ ವಿವರದ ಮಾಹಿತಿ ಆಧಾರಿಸಿ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿ ತಯ್ಯಾರಿಸಿ ಪ್ರಕಟಿಸಲಾಗಿತ್ತು.

ಆದರೆ ಸದರಿ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಅನೇಕ ಆಕ್ಷಪಣೆಗಳಿದ್ದ ಕಾರಣ ಉಲ್ಲೇಖಿತ (4) ರಲ್ಲಿ ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಆಕ್ಷೇಪಣೆ ಸಲ್ಲಿಸಲು ತಿಳಿಸಲಾಗಿತ್ತು . ಅದರಂತೆ ಉಲ್ಲೇಖಿತ (05) ರಲ್ಲಿ ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆರವರು ಸಲ್ಲಿಸಿದ ಆಕ್ಷಪಣೆ ಮಾಹಿತಿ ಮತ್ತು ದೃಢೀಕರಣ ಪತ್ರದ ಆಧಾರದ ಮೇಲೆ ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 31-12-2011ರಲ್ಲಿದಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪ್ರಕಟಿಸಿದೆ ಮತ್ತು ಕಛೇರಿಯ ವೆಬ್ ಸೈಟ್ ( www.cpigulbarga.kar.nic.in) ನೋಡಬಹುದಾಗಿದೆ.

ಷರತ್ತುಗಳು :–

01) ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಅಂತರಜಾಲದಲ್ಲಿ ಬರ್ತಿಮಾಡಿದ ಶಿಕ್ಷಕರ ಸೇವಾವಿವರ ಮಾಹಿತಿಯನ್ನು ಆಧರಿಸಿ ಹಾಗೂ ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆರವರು ಸಲ್ಲಿಸಿದ ಸೇವಾ ವಿವರವನ್ನು ಆಧರಿಸಿ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿದೆ.

2) ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯು ಶಿಕ್ಷಕರ ವಿದ್ಯಾರ್ಹತೆ/ಜನ್ಮ ದಿನಾಂಕ/ಸೇವೆಗೆ ಸೇರಿದ ದಿನಾಂಕ /ಪ್ರಸ್ತುತ ಹುದ್ದೆಗೆ ಬಂದ ದಿನಾಂಕದ ಬಗ್ಗೆ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

3) ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಶಿಕ್ಷಕರು ನಮೂದಿಸಿದಂತೆ ಸೇವಾ ವಿವರದ ಮೂಲ ದಾಖಲೆಗಳನ್ನು ಹಾಗೂ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡ ದಾಖಲೆಗಳಿಗೆ ಪರಿಶಿಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4) ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆರವರು ತಪ್ಪಾಗಿ ಮಾಹಿತಿ ನೀಡಿದಲ್ಲಿ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಜೇಷ್ಠತೆಯನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿರುತ್ತದೆ.

5) ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಶಾಲೆಯ ಮುಖ್ಯಗುರುಗಳು ತಂತ್ರಾಂಶದಲ್ಲಿ ಅಳವಡಿಸಿರುವದರಿಂದ ಮತ್ತು ಮಾಹಿತಿ ಸಲ್ಲಿಸಿರುವುದರಿಂದ ಇದರಲ್ಲಿ ಯಾವೂದೇ ಲೋಪಗಳು ಕಂಡುಬಂದಲ್ಲಿ ಸಂಬದಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಪ್ರೌಢಶಾಲಾ ಮುಖ್ಯಗುರುಗಳು ಜವಾಬ್ದಾರಾಗಿರುತ್ತಾರೆ.

Sd/-
(ಸೈಯದ ಖಲಂದರ)
ನಿರ್ದೇಶಕರು
ಆಯುಕ್ತಾಲಯ ಗುಲಬರ್ಗಾ

ಗೆ,

1) ವಿಭಾಗದ ಎಲ್ಲ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯಕ್ರಮಕ್ಕಾಗಿ
2) ವಿಭಾಗದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ಮುಖಾಂತರ
3) ಕಛೇರಿಯ ಇ–ಆಡಳಿತ ಘಟಕಕ್ಕೆ ಸದರಿ )ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಕಛೇರಿಯ ಅಂತರಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.
4) ಕಛೇರಿಯ ಸಿ2(1) ವಿಭಾಗಕ್ಕೆ

ಪ್ರತಿ:

ಮಾನ್ಯ ಸರಕಾರದ ಕಾಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬೆಂಗಳೂರು ರವರ ದಯಾಪರ ಮಾಹಿತಿಗಾಗಿ